

ಎಡದಿಂದ ಬಲಕ್ಕೆ:

| | | |
|---|---|---|
| 1. | ಮನದ ತುಂಬ ಈಗ ಬರೀ ದುಃಖ | 3 |
| 3. | ತೋರುವವರಾರು, ಆಕೆಯ ತಾಯಿಯ ಮನೆ? | 3 |
| 4. | ಹಲ್ಲು ಮಸೆಯುತ್ತ ಬಂದವನು ಗೆಲ್ಲುವ ಸಾಧ್ಯತೆ ತುಂಬ ಕಡಿಮೆ | 3 |
| 6. | ಪರಿ ಪರಿಯ ಪಯಣಗಳೆಲ್ಲ ಮುಗಿದ ನಂತರವಷ್ಟೇ ವಿವಾಹ | 4 |
| 7. | ಮೂರೂ ಹೊತ್ತು ನ್ಯಾಯವನ್ನೇ ಪಾಲಿಸುವ ಗೌರವಾನ್ವಿತ ಅವನು | 4 |
| 9. | ಕೆಟ್ಟ ನಡವಳಿಕೆಗಳನ್ನು ವಿರೋಧಿಸಿ ಒರಟು ಮಾತು | 4 |
| 11. | ಗವಿಯ ಸಮೀಪ ಇದೇನು ಮಧುರ ಹಾಡು? | 4 |
| 15. | ವ್ಯಾಪಾರದಲ್ಲಿ ನಷ್ಟವಾದದ್ದಕ್ಕೆ ಸಾಕ್ಷ್ಯ ಏನು? | 3 |
| 16. | ತನನ ಹಾಡುವುದರಲ್ಲೇ ಆತ ಮೈ ಮರೆತುಬಿಟ್ಟಿದ್ದಾನೆ | 3 |
| 17. | ಉತ್ಸವಕ್ಕೆ ಹೋಗಲು ಆತನಿಗೆ ಏಕಿಂಥ ಆತುರ? | 3 |

ಮೇಲಿಂದ ಕೆಳಕ್ಕೆ:

| | | |
|---|---|---|
| 1. | ಎದುರಾಳಿಗಳನ್ನೆಲ್ಲ ವಂಚಿಸಿದ ದುಷ್ಟ; ಕೆಟ್ಟ ಮನುಷ್ಯ | 3 |
| 2. | ಸಂಭಾವನೆಯನ್ನು ಪಡೆಯುವಂತಾದದ್ದು ಒಳ್ಳೇ ಅದೃಷ್ಟ | 3 |
| 3. | ಸದಾ ತಣ್ಣಗೇ ಇರುತ್ತಾನೆ  ಅವನಿನ್ನೂ ಯುವಕ | 3 |
| 5. | ಎಲ್ಲವನ್ನೂ ಹೊರತಾಗಿಸಿದಾಗ ಕಂಡದ್ದು ಈ ಹೊಸ ರೀತಿ | 3 |
| 6. | ಸುಂದರ ಪದ್ಯ ಕಟ್ಟಿ ಹಾಡಿದ್ದಕ್ಕೆ ಕೊರಳಿಗೆ ಪಾರಿತೋಷಕ | 3 |
| 8. | ವಿನಯವೇನೆಂದೇ ತಿಳಿದಿಲ್ಲ; ಆತ ಯಾವುದೋ ಅನ್ಯ ದೇಶದವ | 3 |
| 10. | ಪಾಣಿನಿಯ ಮಾತುಗಳೆಲ್ಲ ತುಂಬ ನಯ | 3 |
| 12. | ವ್ಯಾಪಾರದ ನಷ್ಟದಿಂದ ಬೇಸತ್ತು ಅಡವಿ ಸೇರಿದನೇ | 3 |
| 13. | ಸೇತುವೆಯ ಕುಸಿತಕ್ಕೆ ಕಾರಣವಾದದ್ದು ಸ್ತಂಭಗಳ ಶಿಥಿಲೀಕರಣ | 3 |
| 14. | ಯಾರೋ ಸತ್ತಿದ್ದಕ್ಕೆ ಈತನಿಗೆ ಮೈಲಿಗೆಯೇ ? | 3 |

## 20–05–2021 ಉತ್ತರಗಳು

ಎಡದಿಂದ ಬಲಕ್ಕೆ:

1. ಮಹಾಶಯ 3. ವಿರಹ 4. ಯಾಮಿನಿ 6. ತಿರುಪತಿ 7. ದಫೇದಾರ 9.ಮಾವು ಬೇವು 11.ತಿಮಿಂಗಿಲ 13. ತರತಮ 15.ಜುಗ್ಗಕವಿ 17. ಜುಮಕಿ 18. ಮಾನಸಿ 19. ಬಿಗುಮಾನ

ಮೇಲಿನಿಂದ ಕೆಳಕ್ಕೆ:

1. ಮಹತಿ 2. ಯಯಾತಿ 3. ವಿನೋದಾ 5. ನಿಲುವು 7. ದಡೂತಿ 8. ರಸಾಲ 9. ಮಾವುತ 10. ಮರೆವು 12. ಗಿರಾಕಿ 14. ರಕ್ಕಸಿ 15. ಜುಜುಬಿ 16. ವಿಮಾನ

ಪ್ರಶ್ನಾಂಕಣ

# ಹಂಸ ಕ್ಷೀರ ನ್ಯಾಯ: ಅದೇನು?

ಸುಪ್ರಸಿದ್ಧ ಪಕ್ಷಿಯಾದ ಹಂಸವನ್ನು ಕುರಿತು ಪೌರಾಣಿಕ ಕಾಲದಿಂದಲೇ ಜನಜನಿತವಾಗಿರುವ ಒಂದು ಮಿಥ್ಯಾ ಕಲ್ಪನೆ ಇದು! ಒಂದು ಸಾಹಿತ್ಯ ಕೃತಿಯಲ್ಲಿ, ಒಂದು ವಾದ ಅಥವಾ ಚರ್ಚೆಯಲ್ಲಿ ಅಥವಾ ಬೇರಾವುದೇ ಕೆಲಸದಲ್ಲಿ ಮೌಲ್ಯಯುತವಾದ ಅಂಶಗಳನ್ನಷ್ಟೇ ಸ್ವೀಕರಿಸಿ ಉಳಿದಿದ್ದನ್ನು ತ್ಯಜಿಸಿಬಿಡಬೇಕೆಂಬ ಬಿನ್ನಹಕ್ಕೆ ಮೂರ್ತ ಸ್ವರೂಪವನ್ನು ಒದಗಿಸಲು ಈಗಲೂ ಬಳಕೆಯಲ್ಲಿರುವ ರೂಪಕಾಲಂಕಾರದ ಪದಪುಂಜವೇ 'ಹಂಸ ಕ್ಷೀರ ನ್ಯಾಯ'. ಈ ವ್ಯಾಪಕ ಕಲ್ಪನೆಯ, ನಂಬಿಕೆಯ ಪ್ರಕಾರ ಹಂಸಗಳಿಗೆ ಒಂದು ಅನನ್ಯ ಸಾಮರ್ಥ್ಯ ಇದೆ: ಹಾಲು ಮತ್ತು ನೀರನ್ನು ಬೆರೆಸಿ ಹಂಸದ ಮುಂದಿಟ್ಟರೆ ಅದು ಹಾಲಿನಂಶವನ್ನು ಮಾತ್ರ ಪ್ರತ್ಯೇಕಿಸಿ ಹೀರಿ ನೀರನ್ನು ಉಳಿಸಿಬಿಡುತ್ತದೆ! ಹೀಗೆ ಮೌಲಿಕವಾದದ್ದನ್ನು ಮಾತ್ರ ಪರಿಗಣಿಸಿ, ಸ್ವೀಕರಿಸಿ, ಉಳಿದಿದ್ದನ್ನು ಗಣನೆಗೆ ತೆಗೆದುಕೊಳ್ಳದ ಮನೋಧರ್ಮವೇ ಹಂಸ ಕ್ಷೀರ ನ್ಯಾಯ. ಸ್ಪಷ್ಟವಾಗಿಯೇ ವಾಸ್ತವವಾಗಿ ಇದು ಕಿಂಚಿತ್ತೂ ಸತ್ಯವಿಲ್ಲದ ಕೇವಲ ಒಂದು ಮಿಥ್ಯೆ ಅಷ್ಟೆ. ಏಕೆಂದರೆ, ಹಂಸಗಳಿಗೆ ಹಾಲನ್ನುಸೇವಿಸುವ ಆಸಕ್ತಿಯೂ ಇಲ್ಲ, ಅಗತ್ಯವೂ ಇಲ್ಲ. ಹಾಗೆ ಹಾಲು ಮತ್ತು ನೀರನ್ನು ಪ್ರತ್ಯೇಕಿಸುವ ಸಾಮರ್ಥ್ಯವಂತೂ ಇಲ್ಲವೇ ಇಲ್ಲ.

ವಿಸ್ಮಯ ಏನೆಂದರೆ, ಹಂಸಗಳ ಬಗೆಗಿನ ಮಿಥ್ಯಾ ಕಲ್ಪನೆ ಇದೊಂದೇ ಏನಲ್ಲ. ಪುರಾತನ ಕಾಲದಿಂದಲೇ ಜಗದಾದ್ಯಂತ ಪುರಾಣಗಳಲ್ಲೂ, ಮನೋ ಕಲ್ಪನೆಗಳಲ್ಲೂ, ಸಂಗೀತ ರಾಗಗಳಲ್ಲೂ (ಹಂಸ ಧ್ವನಿ, ಹಂಸನಾದ ಇತ್ಯಾದಿ) ಹಂಸದ ಹೆಸರು ಬಹು ವಿಧಗಳಲ್ಲಿ ಬೆರೆತು ಬಂದಿದೆ. ಉದಾಹರಣೆಗೆ 'ಪರಮ ಹಂಸ' (ಅತ್ಯುನ್ನತ ಧಾರ್ಮಿಕ ಸ್ಥಾನ ತಲುಪಿದವರ ವಿಶೇಷ ಅಭಿಧಾನ), 'ರಾಜಹಂಸ' (ವಿದ್ಯಾಧಿದೇವತೆ ಸರಸ್ವತಿಯ ವಾಹನ) ಇತ್ಯಾದಿ ಶ್ರೇಷ್ಠತಾ ಪದವಿಗಳು, ಹಂಸ ಕ್ಷೀರ ನ್ಯಾಯ, ಹಂಸ ಗೀತೆ (ಅಂತಿಮ ಗಾನಕ್ಕೆ ಸಮಾನಾರ್ಥಕ) ಇತ್ಯಾದಿ ಅವಾಸ್ತವ ಕಲ್ಪನೆಗಳು ಹಾಗೂ ಪರಮ ಸೌಂದರ್ಯದ ಲಕ್ಷಣಗಳಾಗಿ ಹಂಸ ವೇಣಿ, ಹಂಸ ನಡಿಗೆ ಮುಂತಾದ ಕಾಲ್ಪನಿಕ ಪ್ರತಿಮೆಗಳು ಹಂಸಗಳಿಗೆ ವಿಶೇಷ ಖ್ಯಾತಿಯನ್ನು ತಂದಿವೆ.




ವಾಸ್ತವವಾಗಿ ಹಂಸಗಳಿಗೆ ಇಂಥ ವಿಶೇಷ ಗುಣಲಕ್ಷಣ ಯಾವುದೂ ಸಲ್ಲುವುದೂ ಇಲ್ಲ. ಉದ್ದ ಕತ್ತಿನ, ಭಾರೀ ಗಾತ್ರದ ಈ ಹಕ್ಕಿಗಳು 'ಬಾತುಕೋಳಿ'ಗಳ ನಿಕಟ ಸಂಬಂಧಿಗಳಾಗಿವೆ. ಹಂಸಗಳಲ್ಲಿ ಸ್ಪಷ್ಟವಾದ ಆರು ಪ್ರಭೇದಗಳಿವೆ (ಮೂರು ಪ್ರಭೇದಗಳು ಚಿತ್ರಗಳಲ್ಲಿವೆ). ಆಫ್ರಿಕಾ ಮತ್ತು ಅಂಟಾರ್ಕ್ಟಿಕಾ ಭೂಖಂಡಗಳನ್ನು ಬಿಟ್ಟು ಇತರೆಲ್ಲೆಡೆ ಅವು ಕಾಣಸಿಗುತ್ತವೆ. ಹಂಸಗಳು ಹಾಡುಗಾರ ಹಕ್ಕಿಗಳಲ್ಲ. ಅವುಗಳದೇನಿದ್ದರೂ ಗುರುಗುಡುವ, ಪಿಸುಗುಡುವ, ಕಿರುಚುವಂತೆ ಕೇಳುವ ಧ್ವನಿ ಅಷ್ಟೆ. ಒಮ್ಮೆ ಜೊತೆಯಾದ ಹೆಣ್ಣು ಗಂಡುಗಳು ಜೀವನ ಪರ್ಯಂತ ಸಂಗಾತಿಗಳಾಗಿ ಬಾಳುತ್ತವೆ. ಹೇಗೋ ಏನೋ, ಅವುಗಳ ವಾಸ್ತವ ಗುಣಗಳಿಂದ ವಿಭಿನ್ನವಾದ ಮಿಥ್ಯೆಗಳಿಗೆ ಗುರಿಯಾಗಿ ಹಂಸಗಳು ಪ್ರಸಿದ್ಧವಾಗಿವೆ.

■ ಎನ್. ವಾಸುದೇವ್